(ಇಂದು ದಿನಾಂಕ 25-10-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಎಮ್.ಎನ್. ವಕೀಲರಿಂದಃ**

ದಾವಾ ಆಸ್ತಿಯಲ್ಲಿ ಪ್ರತಿವಾದಿಯವರಿಗೂ ಜಂಟಿಯಾಗಿ 1/2 ಹಕ್ಕಿದೆ ಎಂದರೆ ಸರಿ. ಈ ದಾವೆ ಸಲ್ಲಿಸುವ 1 ವರ್ಷದ ಮೊದಲು ದಾವಾ ಸ್ಥಳವನ್ನು ಮೋಜಣಿ ಮಾಡಿ ವಾದಿ ಹಾಗೂ ಪ್ರತಿವಾದಿಯವರ ಹಕ್ಕಿನ ಸ್ಥಳವನ್ನು ಗಡಿ ಗುರುತು ಮಾಡಿರುತ್ತೇವೆ ಎಂದರೆ ಸರಿ. ಸದರಿ ಪ್ರತ್ಯೇಕ ಮಾಡಿದ ಜಾಗದಲ್ಲಿ ವಾದಿ ಹಾಗೂ ಪ್ರತಿವಾದಿಯವರು ವಾಸ ಮಾಡಿಕೊಂಡು ಬಂದು ತೆಂಗು ಹಾಗೂ ಅಡಿಕೆಯನ್ನು ಬೆಳೆಸಿ ಬಂದಿರುತ್ತಾರೆ ಎಂದರೆ ಸರಿ. ಕಳೆದ 4 ತಿಂಗಳ ಹಿಂದೆ ದಾವಾ ಸ್ಥಳದಲ್ಲಿ ಪ್ರತಿವಾದಿಯವರು ವಾಸದ ಮನೆ ಕಟ್ಟಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದಾವಾ ಸ್ಥಳದಲ್ಲಿ ವಾದಿ ಹಾಗೂ ಪ್ರತಿವಾದಿಯವರು ವೈವಾಟಿ ಮಾಡಿಕೊಂಡಿರುವ ಜಾಗ ಪ್ರಪ್ರತ್ಯೇಕವಾಗಿ ಇರುವುದು ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಹಕ್ಕು ಪತ್ರಿಕೆ 787 ರ ಯಥಾ ನಕಲಾಗಿದ್ದು, ಸದರಿ ಹಕ್ಕು ಪತ್ರಿಕೆಯಲ್ಲಿ ಬರೆದಿರುವ ಸುಕ್ರು ಪೊಕ್ಕಾ ಗೌಡ ರವರು ಈ ದಾವೆಯ 2 ನೇ ವಾದಿ ಆಗಿರುತ್ತಾರೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು ನಿ.ಡಿ. 1 ಎಂದು ಗುರುತಿಸಲಾಯಿತು. ನಿ.ಡಿ. 1 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ದಾವಾಸ್ತಿ ಸ.ನಂ. 1013 ಹಿಸ್ಸಾ 2 ಕಂಡುಬರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ನಿ.ಡಿ. 1 ರಲ್ಲಿ ನಮೂದಿಸಿರುವ ಎಲ್ಲ ಸ.ನಂ. ಆಸ್ತಿಗಳಲ್ಲಿ ವಾದಿಯರಿಗೆ ಜಂಟಿಯಾಗಿ ಆರ್ಧಾಂಶ ಹಾಗೂ ಪ್ರತಿವಾದಿಯವರಿಗೆ ಜಂಟಿಯಾಗಿ ಅರ್ಧಾಂಶ ಹಕ್ಕು ಇರುತ್ತದೆ ಎಂದರೆ ಸರಿ. ನಿ.ಡಿ. 1 ರಲ್ಲಿ ನಮೂದಿಸಿರುವ ಸ.ನಂ. ನಲ್ಲ ಸಾಗುವಳಿ ಮಾಡಿಕೊಂಡು ಬಂದಿರುವುದಿಲ್ಲ. ದಾವಾಸ್ತಿಯು 1 ರಿಂದ 3 ನೇ ವಾದಿಯರು ಹಾಗೂ ಬಲೀಂದ್ರ ಗೌಡ (1 ನೇ ಪ್ರತಿವಾದಿಯ ಗಂಡ) ಅವರ ಹೆಸರಿಗೆ ಮಂಜೂರು ಆದ ಆಸ್ತಿ ಎಂದರೆ ಸರಿ. ದಾವಾ ಸಲ್ಲಿಸುವ ಪೂರ್ವದಲ್ಲಿ

ದಾವಾಸ್ತಿಯನ್ನು ನೊಂದಣಿ ವಾಂಟಣಿ ಮಾಡಿದ್ದು ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಗೊಕರ್ಣ ಗ್ರಾಮದ ಸ.ನದಂ. 1046 ಹಿಸ್ಸಾ 3 ರ ಪಹಣಿ ಪತ್ರಿಕೆಯಾಗಿದ್ದು, ಅದರಲ್ಲಿ 2 ನೇ ಪ್ರತಿವಾದಿಯ ಹೆಸರು ಕಂಡುಬರುವುದಾಗಿ ಒಪ್ಪಿಕೊಂಡಿದ್ದು ಅದನ್ನು ನಿ.ಡಿ. 2 ಎಂದು ಗುರುತಿಸಲಾಯಿತು. ನಿ.ಡಿ. 1 ರಲ್ಲಿ ನಮೂದಿಸಿರುವ ಆಸ್ತಿಯನ್ನು ಈ ದಾವಾದಲ್ಲಿ ಸೇರಿಸಲು ನನ್ನದು ಯಾವುದು ತಕರಾರು ಇರುವುದಿಲ್ಲ. ನಾನು ನಮ್ಮ ಕುಟುಂಬದ ಎಲ್ಲ ಆಸ್ತಿಗಳನ್ನು ಸೇರಿಸಿ ಈ ದಾವೆಯನ್ನು ಸಲ್ಲಿಸಿದ್ದು ಇರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ